ಮರಳಿ ಪಡೆಯುವುದಕ್ಕೆ ಬೋರೋ, ಗೋರಿ, ಕಮಾವು ಮೌಮೌ ಚಳವಳಿ ಸೇರಿಕೊಂಡಿದ್ದಾರೆ. ಆದರೆ, ನುಜರೋ ಮಾತ್ರ ಓದುತ್ತಿದ್ದಾನೆ. ಅವನ ಬಗ್ಗೆ ತುಂಬಾ ಭರವಸೆಯನ್ನು ಆ ಕುಟುಂಬ ಇಟ್ಟುಕೊಂಡಿದೆ. ಏಕೆಂದರೆ, ಅವನು ಓದಿ ಬಿಳಿಯರ ಜ್ಞಾನ ಕಲಿತು ಆ ಜ್ಞಾನದಿಂದ ತಮ್ಮ ಬಡತನವಷ್ಟೇ ಅಲ್ಲ, ಎಲ್ಲ ಕಪ್ಪು ಜನರ ಏಳಿಗೆಯಾಗುತ್ತದೆ ಎಂಬ ಮಹೋನ್ನತ ಆಸೆ ಆ ಕುಟುಂಬಕ್ಕಿದೆ. ತಂದೆ ನಗುತೋ ನುಜರೋಗೆ ಹೇಳುವ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ. 'ವಿದ್ಯೆಯೇ ಸರ್ವಸ್ವ, ಕಳೆದುಕೊಂಡಿರುವ ಭೂಮಿಯನ್ನು ಶಿಕ್ಷಣದ ಮೂಲಕ ಮರಳಿ ಪಡೆಯಬಹುದು.' ಕಪ್ಪು ಜನಾಂಗದಲ್ಲಿ ಹೆಚ್ಚು ಓದಿದ ಜೋಮೋ ಸಹ ಇದನ್ನೇ ಹೇಳುತ್ತಾನೆ. 'ಶಿಕ್ಷಣ ಅನ್ನೋದೇ ಕೀನ್ಯಾದ ಬೆಳಕು.' (ಪು. 60) ಇದನ್ನೇ ಭಾರತೀಯ ಸಂದರ್ಭದಲ್ಲಿ ಹಿಂದುಳಿದ ದಲಿತ ಜಾತಿಗಳಿಗೆ ಅಂಬೇಡ್ಕರ್ ಹೇಳಿದ್ದು. ಅದರಲ್ಲೂ ಇಂಗ್ಲಿಷ್ ಶಿಕ್ಷಣ ಅಗತ್ಯವಾಗಿ ಬೇಕಾಗಿತ್ತು. **Between the River** ಕಾದಂಬರಿಯಲ್ಲಿ ಶಿಕ್ಷಣ+ಬುಡಕಟ್ಟಿನ ಸಂಸ್ಕೃತಿ+ಆಧುನಿಕತೆ+ರಾಜಕೀಯ ಸ್ವಾತಂತ್ರ್ಯ=ಅಭಿವೃದ್ಧಿ ಎಂಬ ವಿಚಾರಗಳು ಈ ಕಾದಂಬರಿಯಲ್ಲಿಯೂ ಇವೆ. ಆದರೆ, ಈ ಕಾದಂಬರಿಯಲ್ಲಿ ಗತದ ಬಗ್ಗೆ, ಅವರ ಹಿಂದಿನ ಬುಡಕಟ್ಟಿನ ಸಂಪ್ರದಾಯ ಪರಂಪರೆಗಳ ಬಗ್ಗೆ ಅಷ್ಟೊಂದು ಆಸಕ್ತಿ ಇಲ್ಲ. ಇಲ್ಲಿರುವುದು ಭೂಮಿಯ ಪ್ರಶ್ನೆ. ಭೂಮಿ ಇಲ್ಲದೆ ಮನುಷ್ಯ ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ. ಒಂದು ಎಕರೆ ಭೂಮಿ ಇದ್ದರೂ ಶ್ರೀಮಂತ. ಭೂಮಿ ಇಲ್ಲದೆ ಉಳಿದ ಏನೆಲ್ಲಾ ಸವಲತ್ತುಗಳಿದ್ದರೂ ಅವನು ಬಡವನೆ ಎಂಬ ವಾತಾವರಣ ಆಗ ಏರ್ಪಟ್ಟಿತ್ತು. ನುಜರೋಗೆಯ ಕುಟುಂಬದ ಎಲ್ಲಾ ಸದಸ್ಯರು ಈ ಬಗ್ಗೆ ಯೋಚಿಸುತ್ತಾರೆ. ಕನ್ನಡದಲ್ಲಿ ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಚೋಮ ಭೂಮಿಯನ್ನು ಬಯಸುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಫ್ರಿಕಾದ ಕೀನ್ಯಾದಲ್ಲಿ ಬ್ರಿಟಿಷರು ಜನಾಂಗವಾದದ ಹಿನ್ನೆಲೆಯಲ್ಲಿ ಭೂಮಿಯನ್ನು ವಶಪಡಿಸಿಕೊಂಡು ಕೂಲಿ ಕಾರ್ಮಿಕರನ್ನಾಗಿ ಮಾಡಿಕೊಂಡಿದ್ದಾರೆ. 'ಚೋಮನ ದುಡಿ'ಯಲ್ಲಿ ಧರ್ಮಜಾತಿಯ ಹೆಸರಿನಲ್ಲಿ ಚೋಮನಿಗೆ ಜಮೀನು ದೊರೆಯುವುದಿಲ್ಲ.

ಕಾದಂಬರಿಯ ಪ್ರಾರಂಭದಲ್ಲಿಯೇ ಮಹುವಾ ಎಂಬ ಹಳ್ಳಿ, ಕಿಪಾಂಗ ಎಂಬ ನಗರದ ಪ್ರಸ್ತಾಪ ಬರುತ್ತದೆ. ಈ ಪರಿಸರದ ವರ್ಣನೆಯೇ ಬಿಳಿಯರು ಮತ್ತು ಕಪ್ಪು ಜನರನ್ನು ಬೇರ್ಪಡಿಸಿರುವಂತಹ ಜನಾಂಗ ಭೇದದ ವಿವರಗಳನ್ನು ಓದುಗನಿಗೆ ವಿವರಿಸಿಬಿಡುತ್ತದೆ. ಪಟ್ಟಣ, ಅದರ ಸುತ್ತಮುತ್ತಲಿನ ದಾರಿಗಳು, ಅಲ್ಲಿದ್ದ ನಾಲ್ಕು ಬೋರೆಗಳು ಅದಕ್ಕೆ ಅಂಟಿಕೊಂಡಿದ್ದ ಗುಡ್ಡಗಳು. ಇವೆಲ್ಲಾ ಬಿಳಿಯರು ಮತ್ತು ಕರಿಯರ ಸ್ಥಿತಿಗತಿಗಳನ್ನು ಸಾಂಕೇತಿಕವಾಗಿ ವಿವರಿಸುತ್ತವೆ. ಕಪ್ಪು ಜನರ ಭೂಮಿ ಒರಟೊರಟಾಗಿ ಕೆಂಪಗಿದ್ದಿತು; ಬಿಳಿಯರಿಗೆ ಸೇರಿದ ಭೂಮಿ ಹಸಿರಾಗಿತ್ತು ಮತ್ತು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿರಲಿಲ್ಲ ಎಂಬ ಮಾತುಗಳಿಂದ ಬಿಳಿಯರ ಮತ್ತು ಕಪ್ಪು ಜನರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬಹುದು. ಈ ಕಿಪಂಗ ಎಂಬ ಪಟ್ಟಣದಲ್ಲಿಯೂ ಬಿಳಿಯರ ಮತ್ತು ಭಾರತೀಯರ ಅಂಗಡಿಗಳು ಸಾಲು ಸಾಲಾಗಿ ಇದ್ದವು. ಭಾರತೀಯ ವ್ಯಾಪಾರಿಗಳೂ ಸಹ ಶ್ರೀಮಂತರೇ. ಈ ಬಿಳಿಯರು ಮತ್ತು ಭಾರತೀಯರ ಅಂಗಡಿಗಳಲ್ಲಿ, ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದವರು ಕಪ್ಪು ಜನರೇ ಆಗಿದ್ದರು.

ಕೆಲವೇ ಕೆಲವು ಕಪ್ಪು ಜನರು ಅಂಗಡಿಗಳನ್ನು ಇಟ್ಟುಕೊಂಡಿದ್ದರು. ಅಲ್ಲಿ ಪದಾರ್ಥಗಳು ಕಡಿಮೆ ಇದ್ದವು. ಅವುಗಳಿಗೆ ಬೆಲೆಯೂ ಹೆಚ್ಚಾಗಿತ್ತು. ಆದ್ದರಿಂದ, ಕಪ್ಪು ಜನರು ಭಾರತೀಯ ಮತ್ತು ಬಿಳಿಯರ ಅಂಗಡಿಗಳಿಗೆ ಹೋಗುತ್ತಿದ್ದರು. ಕಪ್ಪು ಅಂಗಡಿಯವರು ಆಕ್ಷೇಪವೆತ್ತಿದಾಗ, 'ಆಫ್ರಿಕನ್ನರು ಒಗ್ಗಟ್ಟಾಗಿ ಬೆಲೆ ಕಡಿಮೆ ಮಾಡಲಿ, ನಾವೆಲ್ಲ ಕಪ್ಪು ಜನ ತಾನೆ, ಕಡಿಮೆ ಬೆಲೆಗೆ ಸಿಕ್ಕುವ ಅಂಗಡಿಗೆ ಹೋದರೆ ನನ್ನ ಮೇಲೆ ಏಕೆ ಸಿಟ್ಟು ಮಾಡಿಕೊಳ್ಳಬೇಕು, ಬಿಳಿಯನಾಗಲಿ, ಕೆಂಚನಾಗಲಿ ಬೆಲೆ ಕಡಿಮೆ ಇಡುವವನ